ಸಾಕ್ಷಿಯನ್ನು ದಿನಾಂಕ 13.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರಿದ ಮುಖ್ಯ ವಿಚಾರಣೆ ಪಿರ್ಯಾದಿ ಪರ ಶ್ರೀ ಸಿ ಎಲ್ ವಿವಕೀಲರಿಂದಃ–

ಎರಡು ಆಧಾರ್ ಕಾರ್ಡ್ ನ ನೋಟರೀ ಪ್ರತಿಗಳನ್ನು ಮೂಲ ಪ್ರತಿಗಳೊಂದಿಗೆ ಹಾಜರುಪಡಿಸಿದ್ದು, ನೋಟರೀ ಪ್ರತಿಗಳನ್ನು ಮೂಲ ಪ್ರತಿಗಳೊಂದಿಗ ತಾಳೆ ನೋಡಿ ನೋಟರಿ ಪ್ರತಿಗಳನ್ನು ಕ್ರಮವಾಗಿ ನಿಪಿ–18 ಮತ್ತು 19 ಎಂದು ಗುರುತಿಸಲಾಯಿತು. ಮೂಲ ಆಧಾರ್ ಕಾರ್ಡ್ ಗಳನ್ನು ಹಿಂದಿರುಗಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ಶ್ರೀ ಎಂ.ಕೆ.ಎಸ್ ವಕೀಲರಿಂದಃ–

ಎಂ.ಗುರುಸಿದ್ದಯ್ಯ ಎಂದರೆ ನನ್ನ ತಂದೆ. ನಿಪಿ–16 ನನ್ನ ತಂದೆಯ ಬ್ಯಾಂಕ್ ಖಾತೆಗೆ ಸಂಬಂದಿಸಿದ ಅಕೌಂಟ್ ಸ್ಟೇಟ್ ಮೆಂಟ್ ಆಗಿರುತ್ತದೆ. ನಿಪಿ–15 ನನ್ನ ಬ್ಯಾಂಕ್ ಖಾತೆಗೆ ಸಂಬಂದಿಸಿದ ಅಕೌಂಟ್ ಸ್ಟೇಟ್ ಮೆಂಟ್ ಆಗಿರುತ್ತದೆ. ನಿಪಿ–15 ಮತ್ತು 16 ರ ಪ್ರಕಾರ ದಿಃ22.09.2016 ರಂದು ನನ್ನ ತಂದೆಯ ಬ್ಯಾಂಕ್ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ 5,00,000/– ರೂ ಜಮೆ ಆಗಿರುತ್ತದೆ ಎಂದರೆ ಸರಿ. ನಿಪಿ–14 ಅನ್ನು ದಿಃ24.02.2017 ರಂದು ನನಗೆ ನೀಡಲಾಗಿರುತ್ತದೆ. ನಾನು ನನ್ನ ಆದಾಯಕ್ಕೆ ಸಂಬಂದಿಸಿದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸೇವೆಯಲ್ಲಿರುವ ಬಗ್ಗೆ ಸೇವಾ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಬ್ಯಾಂಕ್ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ 5,00,000/– ರೂ ಜಮೆ ಆಗಿರುವ ಬಗ್ಗೆ ನಾನು ನನ್ನ ಪಿರ್ಯಾದಿಯಲ್ಲಾಗಲೀ, ನೋಟೀಸಿನಲ್ಲಾಗಲೀ ಅಥವಾ ನಾನು ನನ್ನ ಪ್ರಮಾಣ ಪತ್ರದಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ–15 ರಲ್ಲಿ ಯಾವ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ

ಗೊಂಡಿರುತ್ತದೆ ಎನ್ನುವ ಬಗ್ಗೆ ಬ್ಯಾಂಕ್ ಖಾತೆಯ ವಿವರ ಇರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯ ಹೆಸರು ಮಾತ್ರ ಇರುತ್ತದೆ, ಬ್ಯಾಂಕ್ ವಿವರದ ಅವಶ್ಯಕತೆ ಇದ್ದಲ್ಲಿ ದಾಖಲೆಯನ್ನು ಹಾಜರುಪಡಿಸಬಲ್ಲೆ ಎಂದು ಉತ್ತರಿಸುತ್ತಾರೆ. ಆರೋಪಿಗೆ 10 ಲಕ್ಷ ರೂ ಸಾಲ ನೀಡುವಷ್ಟು ನನಗೆ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸಾಗರ